

ತೋರುತ್ತದೆ. ನಮಗೆ ಪೆನ್ನುಭಾಗ್ಯ ಕಲ್ಪಿಸುವ ಉದಾರ ಮನಸ್ಸು ತಾಳಿದರು. ನಾವೇನೂ ಕಡಿಮೆ ಇರಲಿಲ್ಲ. ಆವರೆಗೆ ವಂಚಿಸಿದ್ದರ ಸೇಡು ತೀರಿಕೊಳ್ಳುವವರಂತೆ ಪೆನ್ನನ್ನು ಎಲ್ಲಿ ಬಳಸಬೇಕಿತ್ತೋ ಅಲ್ಲಿ ಬಿಟ್ಟು ಉಳಿದೆಲ್ಲೆಡೆ ಬೇಕಾಬಿಟ್ಟಿ ಉಪಯೋಗಿಸತೊಡಗಿದೆವು. ಅದು ನಮ್ಮ ಕೈಯಲ್ಲಿ ಹೆಚ್ಚುಕಡಿಮೆ ಒಂದು ಆಟಿಕೆಯಾಗಿಯೇ ಒದಗಿಬಂದಿತ್ತು.

ಬೈತಲೆ ಸೀಳಿನಂತಿದ್ದ ನಿಬ್ಬಿನ ತುದಿಯನ್ನು ಕಾಗದಕ್ಕೆ ತಾಗಿಸಿದಾಗ ತಂತಾನೇ ಹರಿದುಬರುವ ಮಸಿ ಬಾಲಮನದಲ್ಲಿ ಸೋಜಿಗ ಮೂಡಿಸುತ್ತಿತ್ತು. ಒರಟೊರಟು ಬಳಕೆಯ ದೆಸೆಯಿಂದ ನಿಬ್ಬಿನ ಚೂಪು ಮೂತಿ ಸವೆದು ಅಗಲವಾಗುವುದು, ಅದರಿಂದ ದಪ್ಪಕ್ಷರ ಮೂಡುವುದು, ಅದನ್ನು ಸರಿಪಡಿಸಲು ನಿಬ್ಬನ್ನು ನೆಲದ ಮೇಲೆ ತಿಕ್ಕುವುದು, ಸರಿಹೋಗದಿದ್ದರೆ ಅದನ್ನು ಹಲ್ಲುಗಳ ನಡುವೆ ಕಚ್ಚುವುದು ಇಂತಹ ಪ್ರಯೋಗಶೀಲತೆಗೇನೂ ಕೊರತೆಯಿರಲಿಲ್ಲ. ಈ ಬಗೆಯ ತರಹೇವಾರು ಕಿರುಕುಳಗಳನ್ನು ನಿಬ್ಬುಗಳು ಎಷ್ಟಂತಾ ತಾಳಿಕೊಂಡಾವು! ಎರಡು ತುಟಿಗಳು ಕೂಡಿದಂತಹ ನಿಬ್ಬಿನ ತುದಿಯ ಒಂದು ಭಾಗ ಡೊಂಕಾಗುವುದು, ಕಳಚಿಬೀಳುವುದು ಮಾಮೂಲಾಗಿತ್ತು. ಆಗ ಉಳಿದ ಒಂದು ತುಟಿಯಲ್ಲೇ ಸೀರು ದನಿ ಹೊಡಿಸಲು ಹೆಣಗುವ ನಿಬ್ಬಿನ ಸ್ಥಿತಿ ಅಯೋಮಯ.

ಸಿಟ್ಟು ನನಗೆ ಪಿತ್ರಾರ್ಜಿತ ಸ್ವತ್ತು. ಬೇಕಾದರೆ ಆನುವಂಶಿಕ ಸ್ವಭಾವ ಅನ್ನಿ, ಪರವಾಗಿಲ್ಲ. ಬಾಲ್ಯದಲ್ಲಿಯೇ ಸಿಟ್ಟಿನ ಒಡೆತನ ಸ್ಥಾಪಿಸಿದ್ದೆ. ಈ ಕಾರಣಕ್ಕೇ ಊರಲ್ಲಿ ನನ್ನನ್ನು 'ಅಸಿಟ್ಟು' ಎಂದು ಅಡ್ಡಹೆಸರಿಟ್ಟು ರೇಗಿಸುತ್ತಿದ್ದರು. ಒಮ್ಮೆ ಯಾವುದೋ ಸಿಟ್ಟಿನ ಭರದಲ್ಲಿ ಇಂಕು ಪೆನ್ನಿನ ನಿಬ್ಬನ್ನು ನೆಲಕ್ಕೆ ಕುಕ್ಕಿಬಿಟ್ಟೆ. ಅನಂತರ ಸಿಟ್ಟು ಇಳಿದ ಮೇಲೆ ಎಷ್ಟು ಪರಿತಪಿಸಿದರೂ ಕುಟ್ಟಿದ ಪೆನ್ನು ನೆಟ್ಟಗಾಗುವಂತಿರಲಿಲ್ಲ. ನ್ಯಾಯಾಧೀಶರು ಆರೋಪಿಗೆ ಮರಣ ದಂಡನೆ ಶಿಕ್ಷೆ ವಿಧಿಸಿದ ಅನಂತರ ಆ ಆದೇಶ ಬರೆದ ಪೆನ್ನಿನ ನಿಬ್ಬನ್ನು ಬಹಿರಂಗ ನ್ಯಾಯಾಲಯದಲ್ಲಿಯೇ ಮೇಜಿಗೆ ಚುಚ್ಚಿ ಮುರಿಯುತ್ತಾರಂತೆ. ಮರಣ ದಂಡನೆಯಂತಹ ಉಗ್ರ ಶಿಕ್ಷೆ ಕೊಡುವ ಪ್ರಸಂಗ ಮತ್ತೆ ಬರದಿರಲಿ